ಮಂಗಳೂರು ಎಣ್ಣೆ ಶುದ್ಧೀಕರಣಕ್ಕೆ ಸರ್ಕಾರವು ವಶಪಡಿಸಿಕೊಂಡ ಜಾಗಕ್ಕೆ ಪರಿಹಾರ ಧನ ನೀಡುವ ಬಗ್ಗೆ

1674: ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಂಗಳೂರು ಎಣ್ಣೆ ಶುದ್ಧೀಕರಣ ಕೇಂದ್ರಕ್ಕೆ ಸರಕಾರವು ವಶಪಡಿಸಿದ ಜಾಗದ ಭೂಮಾಲೀಕರಿಗೆ ಪರಿಹಾರದ ಹಣ ಮಂಜೂರು ಮಾಡಿರುವುದೇ;

ಆ. ಪರಿಹಾರ ಹಣವನ್ನು ಕೃಷಿ ಭೂಮಿ ಮತ್ತು ಕೃಷಿಯೇತರ ಭೂಮಿ ಎಂದು ಪರಿಗಣಿಸಲಾಗಿದೆಯೇ;

ಇ. ಪರಿಗಣಿಸಿದ್ದಲ್ಲಿ ಒಂದೇ ಭೂಮಿಯಲ್ಲಿ ಒಬ್ಬರಿಗೆ ಜಾಸ್ತಿ ಒಬ್ಬರಿಗೆ ಕಡಿಮೆ ಪರಿಹಾರ ಧನ ಕೊಡಲಾಗಿದೆಯೇ;

ಈ. ಹಾಗಿದ್ದಲ್ಲಿ ಒಂದೇ ಭೂಮಿಯಲ್ಲಿ ಪರಿಹಾರ ಹಣ ಮಂಜೂರು ಮಾಡುವಾಗ ತಾರತಮ್ಯ ಮಾಡಿದ ಹಾಗೆ ಆಗುವುದಿಲ್ಲವೇ;

ಉ. ತಾರತಮ್ಯವಾದಲ್ಲಿ ಎಲ್ಲರಿಗೂ ಒಂದೇ ದರದಲ್ಲಿ ಪರಿಹ್ಹಾರ ಹಣ ಮಂಜೂರು ಮಾಡುವಂತೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ಮಂಗಳೂರು ತೈಲ ಶುದ್ಧೀಕರಣ ಕೇಂದ್ರಕ್ಕೆ ಸರ್ಕಾರವು ವಶಪಡಿಸಿದ ಜಾಗದ ಭೂಮಾಲೀಕರಿಗೆ ಪರಿಹಾರದ ಹಣ ಮಂಜೂರು ಮಾಡಿದೆ.

ಆ. ಪರಿಹಾರ ಹಣವನ್ನು ಕೃಷಿ ಭೂಮಿ ಮತ್ತು ಕೃಷಿಯೇತರ ಭೂಮಿ ಎಂದು ಪರಿಗಣಿಸಿರುವುದಿಲ್ಲ. ಕಂದಾಯ ಇಲಾಖೆಯ ದಾಖಲಾತಿಗಳಲ್ಲಿರುವಂತೆ ತರಿ, ಖುಷ್ಕಿ ಮತ್ತು ಬಾಗಾಯ್ತು ಭೂಮಿ ಎಂದು ಪರಿಗಣಿಸಲಾಗಿದೆ.

ಇ. ಪರಿಗಣಿಸಿರುವುದಿಲ್ಲ. ಆದುದರಿಂದ ಒಬ್ಬರಿಗೆ ಜಾಸ್ತಿ ಒಬ್ಬರಿಗೆ ಕಡಿಮೆ ಪರಿಹಾರ ಕೊಡುವ ಪ್ರಮೇಯ ಇರುವುದಿಲ್ಲ.

ಈ. ಹಾಗಿಲ್ಲದಿರುವುದರಿಂದ ತಾರತಮ್ಯವಾಗಿರುವುದಿಲ್ಲ.

ಉ. ಉದ್ಭವಿಸುವುದಿಲ್ಲ.

ಕೊಳ್ಳೇಗಾಲದ ಮಹದೇಶ್ವರ ಕಾಲೇಜು ಹಾಸ್ಟಲ್ ಕಟ್ಟಡ ನಿರ್ಮಾಣ ಮಾಡುವಲ್ಲಿ ವಿಳಂಬ ಉಂಟಾಗುತ್ತಿರುವ ಬಗ್ಗೆ

1322: ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೈಸೂರು ಜಿಲ್ಲೆ ಕೊಳ್ಳೇಗಾಲದಲ್ಲಿ ಸರ್ಕಾರಿ ಮಹದೇಶ್ವರ ಕಾಲೇಜು ಪ್ರಾರಂಭವಾಗಿ ಸುಮಾರು 26 ವರ್ಷಗಳಾಗಿರುವುದು ನಿಜವೇ;